148th, ಕ್ರ.ಸಂ. 45

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ

### ವಿಷಯ:-

ಸಹಕಾರ ಬ್ಯಾಂಕುಗಳಿಂದ ಶೂನ್ಯ ಬಡ್ಡಿ ದರದಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವಾಗ ರೈತರಿಂದ ಅನಾವಶ್ಯಕ ದಾಖಲೆ ಪಡೆಯುವುದನ್ನು ತಡೆಗಟ್ಟುವ ಕುರಿತು

### ಉತ್ತರ:

ರಾಜ್ಯ ಸರ್ಕಾರವು ರಾಜ್ಯದ ರೈತರಿಗೆ ಸಹಕಾರ ಸಂಸ್ಥೆಗಳ ಮೂಲಕ ರೂ.3.00 ಲಕ್ಷಗಳ ವರೆಗೆ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ ಒದಗಿಸುವ ಯೋಜನೆಯನ್ನು 2008 ನೇ ವರ್ಷದಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯನ್ನು ಕಾಲಕಾಲಕ್ಕೆ ವಿಸ್ತರಿಸುತ್ತಾ ಸರ್ಕಾರವು ರಾಜ್ಯದ ರೈತರಿಗೆ ಅನುಕೂಲಗಳನ್ನು ಮಾಡಿಕೊಡುತ್ತಿವೆ.

ರೈತ ಸದಸ್ಯರಿಗೆ ಬೆಳೆ ಸಾಲವನ್ನು ನಬಾರ್ಡ್ ಪುನರ್ಧನದ ಸಹಯೋಗದೊಂದಿಗೆ ಹಾಗೂ ಸಹಕಾರಿ ಸಂಸ್ಥೆಗಳು ಹೊಂದಿರುವ ಸ್ವಂತ ಸಂಪನ್ಮೂಲಗಳಿಂದ ವಿತರಿಸುವ ಪದ್ಧತಿ ಜಾರಿಯಲ್ಲಿದೆ. ನಬಾರ್ಡ್ ಒದಗಿಸುವ ಪುನರ್ಧನದಿಂದ ರಾಜ್ಯದ ಬೇಡಿಕೆಗನುಗುಣವಾಗಿ ರೈತರಿಗೆ ಸಾಲ ಒದಗಿಸಲು ಸಾಧ್ಯವಾಗದ ಕಾರಣ ಸಹಕಾರ ಸಂಘ ಮತ್ತು ಬ್ಯಾಂಕುಗಳು ಸಂಗ್ರಹಿಸುವ ಠೇವಣಿ ಮೊತ್ತವನ್ನು ಬೆಳೆ ಸಾಲ ವಿತರಣೆಯಲ್ಲಿ ವಿನಿಯೋಗಿಸಿಕೊಳ್ಳಲಾಗುತ್ತಿದೆ. ಪ್ರಸ್ತುತ ರೂ.3.00 ಲಕ್ಷಗಳ ವರೆಗೆ ಬೆಳೆ ಸಾಲಕ್ಕೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳ ಪರವಾಗಿ ಪ್ಯಾಕ್ಸ್ ಗಳ ಹಂತದಲ್ಲಿ ಈ ಕೆಳಕಂಡ ದಾಖಲೆಗಳನ್ನು ಪಡೆಯಲಾಗುತ್ತದೆ.

1. ಸಾಲದ ಅರ್ಜಿ
2. ಆಧಾರ್ ಕಾರ್ಡ್
3. ಪಹಣಿ
4. ರೇಷನ್ ಕಾರ್ಡ್
5. ಪಾನ್ ಕಾರ್ಡ್
6. ಇತರೇ ಬ್ಯಾಂಕುಗಳಿಂದ ಬೇಬಾಕಿ ಪ್ರಮಾಣ ಪತ್ರ
7. ಬೆಳೆ ದೃಢೀಕರಣ ಪತ್ರ
8. ಅಡಮಾನ ಮಾಡಲು ಡಿಕ್ಲರೇಷನ್ ( ಫಾರಂ –3 ನಮೂನೆ),
9. ಮುಚ್ಚಳಿಕೆ ಪತ್ರ (ಪ್ರಾಮಿಸರಿ ನೋಟ್)

ಈ ದಾಖಲೆಗಳನ್ನು ಒದಗಿಸುವ ರೈತರಿಗೆ ಅನಾನುಕೂಲಗಳಾಗುತ್ತಿರುತ್ತವೆ ಎಂದು ಮನವರಿಕೆಯಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು FRUITS ತಂತ್ರಾಂಶವನ್ನು ಸಾಲ ವಿತರಣೆಗೆ ಅಳವಡಿಸುವ ಮೂಲಕ ರೈತರಿಗೆ ದಾಖಲೆಗಳನ್ನು ಒದಗಿಸುವಲ್ಲಿ ಸರಳೀಕರಣ ಮಾಡಿಕೊಡಲಾಗಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಜಿಲ್ಲಾ ಸಹಕಾರ ಕೇಂದ್ರ ಸಹಕಾರ ಬ್ಯಾಂಕುಗಳು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಮತ್ತು ಎಲ್ಲಾ ಸಹಕಾರಿ ಸಂಸ್ಥೆಗಳು ಕೃಷಿ ಸಾಲಗಳನ್ನು ವಿತರಿಸಲು ಮತ್ತು ಕೃಷಿ ಸಾಲದ ಮೇಲೆ ಋಣವನ್ನು ಸೃಜಿಸಿ ಪಹಣಿಗಳಲ್ಲಿ ದಾಖಲು ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಅಭಿವೃದ್ಧಿಪಡಿಸಿದ FRUITS (Farmer Registration and Unified Beneficiary Information System) (ರೈತ ನೋಂದಣಿ ಮತ್ತು ಏಕೀಕೃತ ಫಲಾನುಭವಿ ರೈತ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ) ತಂತ್ರಾಂಶ ಮತ್ತು FRUITS-BANK web portal (esaala.fruits.karnataka.gov.in) ಅನ್ನು ಬಳಸಲು FRUITS ದತ್ತಾಂಶವನ್ನು ಬಳಸಲು ಸರ್ಕಾರದ ಆದೇಶ ಸಂಖ್ಯೆ ಸಿಒ 204 ಸಿಎಲ್ಎಸ್ 2021, ಬೆಂಗಳೂರು, ದಿ.08.10.2021 ರಲ್ಲಿ ಆದೇಶ ಹೊರಡಿಸಲಾಗಿದೆ.

ಅದರನ್ವಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು, ಪಿಕಾರ್ಡ್ ಬ್ಯಾಂಕ್‌ಗಳು ಮತ್ತು ಕಸ್ಕಾರ್ಡ್ ಬ್ಯಾಂಕ್, ಪ್ಯಾಕ್ಸ್‌ಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳಿಗೆ FRUITS ತಂತ್ರಾಂಶವನ್ನು ಬಳಸಿ ಪಹಣಿಗಳಲ್ಲಿ ಋಣವನ್ನು ಸೃಜಿಸಲು/ಮಾರ್ಟ್ ಗೇಜ್ ಮಾಡಲು ಇ- ಆಡಳಿತ ಇಲಾಖೆಯಿಂದ ಲಾಗ್ ಇನ್ ನೀಡಲಾಗಿದ್ದು, ಸಂಘಗಳ ಮಟ್ಟದಲ್ಲಿಯೇ ರೈತರ ಮೊಬೈಲ್‌ಗೆ ಓಟಿಪಿ ಕಳುಹಿಸುವುದರಿಂದ ರೈತರ ಡಿಜಿಟಲ್ ಸಹಿಯನ್ನು ಪಡೆದು ಭೋಜಾ ದಾಖಲಿಸಲು ಉಪ ನೊಂದಣಾಧಿಕಾರಿಗಳ ಲಾಗ್ ಇನ್‌ಗೆ ಫಾರಂ-3 ಡಿಕ್ಲರೇಷನ್ ನನ್ನು ಆನ್‌ಲೈನ್ ಮೂಲಕ ಸಲ್ಲಿಸಲಾಗುತ್ತದೆ. ಈ ತಂತ್ರಾಂಶದಿಂದ ಸಹಕಾರ ಸಂಘಗಳು ಇತರೇ ಬ್ಯಾಂಕುಗಳಲ್ಲಿನ ಬೇಬಾಕಿ ಪ್ರಮಾಣ ಪತ್ರವನ್ನು ಪಡೆಯುವ ಅವಶ್ಯಕತೆಯೂ ಸಹ ಇರುವುದಿಲ್ಲ.

FRUITS ತಂತ್ರಾಂಶಕ್ಕೆ ಸಹಕಾರ ಸಂಸ್ಥೆಗಳಿಂದ ಸಾಲ ಪಡೆಯುವ ಎಲ್ಲಾ ರೈತರ ಮಾಹಿತಿಯನ್ನು ಅಳವಡಿಸುವ ಕೆಲಸ ಕೈಗೊಂಡು ಸಮರೋಪಾದಿಯಲ್ಲಿ ಕ್ರಮವಿಡಲಾಗಿದೆ. ಈ FRUITS ತಂತ್ರಾಂಶವು ಈಗಾಗಲೇ ಚಾಲ್ತಿಯಲ್ಲಿರುವ ಭೂಮಿ ಮತ್ತು ಕಾವೇರಿ ತಂತ್ರಾಂಶಕ್ಕೆ ಜೋಡಣೆ ಮಾಡಲಾಗಿದೆ. ಸಾಲ ಪಡೆಯುವ ರೈತನ ವಿವರವನ್ನು ಈ FRUITS ತಂತ್ರಾಂಶಕ್ಕೆ ಅಳವಡಿಸಿದ ಕೂಡಲೇ ಅವರ ಆಸ್ತಿ ವಿವರಗಳು ಭೂಮಿ ತಂತ್ರಾಂಶದಿಂದ ಹಾಗೂ ಪಡೆಯುವ ಸಾಲಕ್ಕೆ ಆಧಾರವಾಗಿ ಭೂಮಿಯನ್ನು ಅಡಮಾನ ಮಾಡುವ ಪದ್ಧತಿಯನ್ನು ಕಾವೇರಿ ತಂತ್ರಾಂಶದಿಂದ ತನ್ನಿಂತಾನೆ ಪಡೆಯುವುದರ ಮೂಲಕ ರೈತನು ಪ್ರತೀ ಸಾಲ ಪಡೆಯುವ ಸಂದರ್ಭದಲ್ಲಿಯೂ ತಾಲ್ಲೂಕು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲಾಗಿದೆ.

ಈ ಮೇಲಿನಂತೆ ರಾಜ್ಯದ ರೈತರ ಶ್ರೇಯೋಭಿವೃದ್ಧಿಗಾಗಿ ಸರಳವಾಗಿ ಸಾಲ ವಿತರಣೆ ಮಾಡುವ ಕ್ರಮ ಜರುಗಿಸಲಾಗಿದೆ.

**ಸಂಖ್ಯೆ: ಸಿಒ 476 ಸಿಎಲ್ಎಸ್ 2022**

**(ಎಸ್. ಟಿ. ಸೋಮಶೇಖರ್)**

**ಸಹಕಾರ ಸಚಿವರು**